ಭೇಟಿಯಾದದ್ದು! ಈಗ ಇನ್‌ಸ್ಟಿಟ್ಯೂಟ್ ಇರುವ ಬೀದಿಗೆ ದಂಪತಿಯ ಹೆಸರನ್ನೇ ನೀಡಲಾಗಿದೆ.

ಮ್ಯೂಸಿಯಂ ಮುಂದಿದ್ದ ಆಸ್ಪತ್ರೆಯ ನಾಲ್ಕನೇ ಮಹಡಿಯಲ್ಲಿರುವ ಆನ್ ಹೌರಿ ಅವರ ಕೊಠಡಿಗೆ ಹೋದೆವು. ಕಾಫಿಯೊಡನೆ ಸತ್ಕರಿಸಿ ನಮ್ಮನ್ನು ಬಹು ದಿನಗಳಿಂದ ಬಲ್ಲವರಂತೆ ಮಾತನಾಡಿದರು. ಅವರಿಗೆ ಮೇರಿ ಮತ್ತು ಪಿಯೆರಿ ಬಗ್ಗೆ ಅಸಾಧಾರಣ ತಿಳಿವಳಿಕೆ ಇದ್ದದ್ದು ಸ್ಪಷ್ಟವಾಯಿತು. ನಾನು ಬರೆದ ಮೇರಿಯ ಜೀವನ ಚರಿತ್ರೆಯ ಬಗ್ಗೆ ನನಗೆ ಅನುಮಾನಗಳಿದ್ದವು. ನನ್ನ ಪ್ರಶ್ನೆಗಳಿಗೆ ಅವರು ಉತ್ತರಿಸಿದರು. ಸಲಹೆಗಳನ್ನು ನೀಡಿದರು.

ನನ್ನ ಒಂದು ಪ್ರಶ್ನೆ, ಮೇರಿ ಮತ್ತು ಪಾಲ್ ಲಾಂಜೇವಾನ್ ಅವರ ಸಂಬಂಧವನ್ನು ಕುರಿತಾದುದಾಗಿತ್ತು. ತನ್ನ ಗಂಡ ಪಿಯೆರಿ ಮರಣ ಹೊಂದಿದ ನಂತರ ಮೇರಿ ಅವನ ವಿದ್ಯಾರ್ಥಿ ಪಾಲ್ ಲಾಂಜೇವಾನ್ ಅವನಲ್ಲಿ ಅನುರಕ್ತಳಾದಳು. ಇದರ ಬಗ್ಗೆ ಪ್ಯಾರಿಸ್‌ನ ಬೌದ್ಧಿಕ ವಲಯಗಳಲ್ಲಿ ಸಾಕಷ್ಟು ಚರ್ಚೆಯಾಯಿತು, ಅಂತರರಾಷ್ಟ್ರೀಯ ಸುದ್ದಿಯಾಯಿತು. ಪರಿಸ್ಥಿತಿ ಒಂದು ಬಂದೂಕು ಕಾಳಗದವರೆಗೂ ಹೋಗಿ ತಣ್ಣಗಾಯಿತು. ಆಶ್ಚರ್ಯವೆಂದರೆ, ಮೇರಿಯ ಮಗಳು ಈವ್ ಬರೆದಿರುವ ತನ್ನ ತಾಯಿಯ ಜೀವನ ಚರಿತ್ರೆಯಲ್ಲಿ ಇದರ ಬಗ್ಗೆ ಒಂದು ಮಾತನ್ನೂ ಬರೆದಿಲ್ಲ. ಈ ಪ್ರಕರಣದ ಬಗ್ಗೆ ನಾನು ಬರೆಯಬೇಕೆ, ಬೇಡವೇ? ಆನ್ ಹೌರಿ ಅವರಿಗೆ ಯಾವ ಸಂಶಯವೂ ಇರಲಿಲ್ಲ. 'ಖಂಡಿತ ಬರೆಯಬೇಕು' ಎಂದರು. ಅವರು ಮತ್ತೊಂದು ವಿಷಯವನ್ನು ಹೊರಗೆಡವಿದರು. ಈಗ ಅದು ಎಲ್ಲರಿಗೂ ತಿಳಿದ ವಿಚಾರ, ಮೇರಿ ಕ್ಯೂರಿಯ ಮೊಮ್ಮಗಳು, ಹೆಲೆನ್, (ಐರಿನ್ ಕ್ಯೂರಿಯ ಮಗಳು) ಲಾಂಜೇವಾನನ ಮೊಮ್ಮಗ, ಮೈಕೆಲ್ ಲಾಂಜೇವಾನ್ನನನ್ನು ಮದುವೆಯಾದಳು. ಮದುವೆಯಾದಾಗ ಈ ಮದುಮಕ್ಕಳಿಗೆ ತಮ್ಮ ತಾತ ಮತ್ತು ಅಜ್ಜಿಯರ ಸಂಬಂಧದ ಅರಿವಿರಲಿಲ್ಲವಂತೆ! ಚರಿತ್ರಕಾರರಿಗೆ ಬಗೆಯಲು ಅನಂತ ಅವಕಾಶ.

ಮೊಮ್ಮಗಳು ಹೆಲೆನ್ ಅವರಿಗೆ ಈಗ 96 ವರ್ಷಗಳು. ನ್ಯೂಕ್ಲಿಯರ್ ಫಿಸಿಕ್ಸ್ ಅಥವಾ ಬೈಜಿಕ ಭೌತವಿಜ್ಞಾನದಲ್ಲಿ ಪರಿಣತೆ. ಇಂದಿಗೂ ಇದೇ ಪ್ರಯೋಗಾಲಯಕ್ಕೆ ಊರುಗೋಲನ್ನು ಹಿಡಿದು ಬರುತ್ತಾರೆ. ಅಂತೆಯೇ 93 ವರ್ಷಗಳ ಅವರ ತಮ್ಮ ಪಿಯೆರಿ ಲಾಂಜೇವಾನ್. ಇಬ್ಬರನ್ನೂ ನೋಡಬಯಸಿದೆ. 'ನೀವು ಪ್ಯಾರಿಸ್‌ನಲ್ಲಿ ಇರುವ ದಿನಗಳಲ್ಲಿ ನಾನು ಅಲ್ಲಿ ಇರುವುದಿಲ್ಲವಲ್ಲ' ಎಂದು ಹೆಲೆನ್ ಉತ್ತರ ನೀಡಿದರು. ಹೌದು, ಅವರು ಕರಾವಳಿ ಪ್ರದೇಶವಾದ ಬ್ರಿಟನಿಗೆ ಹೋಗಿದ್ದರು.

ಸಮಯವಾಗುತ್ತಿದ್ದಂತೆ ಆನ್ ಹೌರಿ ನಮ್ಮನ್ನು ಮೇರಿಕ್ಯೂರಿ ಮ್ಯೂಸಿಯಂಗೆ ಕರೆತಂದರು. ಎರಡು ನಿಮಿಷಗಳ ಕಾಲ್ನಡಿಗೆ. ನಿರ್ದೇಶಕ ರೆನಾಡ್ ತಮ್ಮ ಕೊಠಡಿಯಲ್ಲಿ ನಮ್ಮನ್ನು ಬರಮಾಡಿಕೊಂಡರು. 'ಈಗ ಮ್ಯೂಸಿಯಂಗೆ ರಜಾದಿನಗಳು. ಆದರೆ ನಿಮಗಾಗಿ ಅದನ್ನು ತೆರೆದಿದ್ದೇವೆ' ಎಂದಾಗ ನಾವು ಕೃತಜ್ಞತೆಯಲ್ಲಿ ಕರಗಿಹೋದೆವು. ಇಂತಹ ಗೌರವವನ್ನು ನಾವು ನಿರೀಕ್ಷಿಸಿರಲಿಲ್ಲ.



ಮೇರಿ, ಪಿಯೆರಿ, ಐರಿನ್ ಮತ್ತು ಫ್ರೆಡೆರಿಕ್ ಜೋಲಿಯೊಟ್

ಮೊದಲು ಕಟ್ಟಡದ ಹೊರಭಾಗವನ್ನು ವೀಕ್ಷಿಸಿದೆವು. ನಾನು ನನ್ನ ಪುಸ್ತಕಗಳಲ್ಲಿಯೂ ಬರೆದಿದ್ದೇನೆ. ಮೇರಿ ಬಯಸಿ ಬಯಸಿ ಕಟ್ಟಡಕ್ಕೆ ದೊಡ್ಡ ಕಿಟಕಿಗಳನ್ನು ಇಡಿಸಿದ್ದಳು. ಅವಳಿಗೆ ಅವುಗಳ ಹಿಂದೆ ನಿಂತು ಸುತ್ತಲಿನ ತೋಟವನ್ನು ನೋಡುವ ಹಂಬಲ. ಇದಲ್ಲದೆ ಅಲ್ಲಿ ಅನೇಕ ಗುಲಾಬಿ ಗಿಡಗಳನ್ನು ತಾನೇ ನೆಟ್ಟಿದ್ದಳು. ಅವುಗಳನ್ನು ಪೋಷಿಸುತ್ತಿದ್ದಳು. ಅವಳು ಕೊನೆಯ ಬಾರಿಗೆ ಇಲ್ಲಿಂದ ಮನೆಗೆ ಹೋದಾಗ ಒಬ್ಬ ನೌಕರನನ್ನು ಕರೆದು, 'ಈ ಗುಲಾಬಿ ಗಿಡ ಬಾಡಿದೆ. ಚೆನ್ನಾಗಿ ನೀರು ಹಾಕಿ ನೋಡಿಕೋ' ಎಂದಿದ್ದಳು. ಮನೆಗೆ ಹೋದಾಗ ಕಾದಿತ್ತು ಮರಣ. ಈಗ ಅಲ್ಲಿ ಇನ್ನೂ ಬೇರೆ ಬೇರೆ ಗಿಡಮರಗಳಿವೆ.

ಇಲ್ಲಿರುವ ಮ್ಯೂಸಿಯಂ ವಾರ್ಸಾ ಮ್ಯೂಸಿಯಂಗಿಂತ ದೊಡ್ಡದು. ಆದರೆ ಎಲ್ಲೆಲ್ಲೂ ಚಿತ್ರಗಳಿಲ್ಲ. ಮೇರಿ ಕ್ಯೂರಿ ಉಪಯೋಗಿಸಿದ ಉಪಕರಣಗಳನ್ನು ಇಲ್ಲಿಯೂ ಕಾಣಬಹುದು. ನನ್ನ ಗಮನ ಸೆಳೆದಿದ್ದು ಅಮೆರಿಕ ಸರ್ಕಾರ ಮೇರಿಗೆ ನೀಡಿದ ರೇಡಿಯಂ ಅನ್ನು ಪ್ಯಾಕ್ ಮಾಡಿರುವ ಪರಿಕರ. ಸೀಸದ ಶೀಶೆಗಳಲ್ಲಿ ಅದನ್ನು ಇರಿಸಿ, ಶೀಶೆಯನ್ನು ಮರದ ಪೆಟ್ಟಿಗೆಯಲ್ಲಿ ಜೋಪಾನ ಮಾಡಿದ್ದಾರೆ. ಇವನ್ನು ಹಡಗಿನಲ್ಲಿ ಕಳುಹಿಸಲಾಯಿತು. ಅಧ್ಯಕ್ಷ ಜಾರ್ಡಿನ್ ಮೇರಿಗೆ ನೀಡಿದ್ದು ಇವನ್ನು ತೆರೆಯುವ ಕೀಲಿಕೈ ಮಾತ್ರ. ಅದನ್ನು ಕೂಡ ಇಲ್ಲಿ ಪ್ರದರ್ಶನ ಮಾಡಲಾಗಿದೆ.

ಗೋಡೆಯ ಮೇಲಿರುವ ಒಂದು ಚಿತ್ರಪಟ ನಮ್ಮನ್ನು ಕರೆಯಿತು. ಅದರಲ್ಲಿ 1946ರಲ್ಲಿ ಇಲ್ಲಿ ಅಧ್ಯಯನ ನಡೆಸಿದ ಭಾರತೀಯ ಭಾಸ್ಕರ್ ಗಂಗಾಧರ್ ಗೋಖಲೆ ಅವರ ಚಿತ್ರವಿದೆ. ಹೆಚ್ಚಿನ ವಿವರಗಳಿಲ್ಲ.

ಮೇರಿ ತನ್ನ ವಿಕಿರಣ ಪಟುತ್ವ ಅಧ್ಯಯನದಲ್ಲಿ ಉಪಯೋಗಿಸಿದ ಕ್ವಾಡ್ರಂಟ್ ಎಲೆಕ್ಟ್ರೋ ಮೀಟರ್ ಇಲ್ಲಿಯೂ ಇದೆ. ಇವೆಲ್ಲಕ್ಕಿಂತ ನನ್ನನ್ನು ಅತಿಭಾವುಕನನ್ನಾಗಿ ಮಾಡಿದ್ದು ಮೇರಿಯ ಕಚೇರಿ ಅಥವಾ ಕೊಠಡಿ. ಆಕೆ ಡೈರೆಕ್ಟರ್ ಆಗಿ ಇಲ್ಲಿ ಕುಳಿತೇ ಸಂಸ್ಥೆಯ ಕಾರ್ಯಭಾರವನ್ನು ನಿರ್ದೇಶಿಸಿದ್ದು. ಅಲ್ಲಿ ಆಕೆ ಕೂರುತ್ತಿದ್ದ ಕುರ್ಚಿ, ಮುಂದಿರುವ ಮೇಜು ಇವೆ. ಮೇಜಿನ ಮೇಲೆ ಫೋನ್, ಕಾಗದ ಪತ್ರಗಳು, ಟೇಬಲ್ ಲ್ಯಾಂಪ್, ಹಿಂದೆ ಮತ್ತು ಪಕ್ಕ ಇರುವ ಕಪಾಟುಗಳಲ್ಲಿ ಪುಸ್ತಕಗಳು ಮತ್ತು ಪಿಯೆರಿ ಕ್ಯೂರಿಯ ಚಿತ್ರ. ಎರಡು ನೊಬೆಲ್ ಬಹುಮಾನ ಗಳಿಸಿ, ವಿಕಿರಣ ಪಟುತ್ವ ಕಂಡುಹಿಡಿದು ಭೌತವಿಜ್ಞಾನದಲ್ಲಿ ಹೊಸ ಪ್ರಭೇದವನ್ನು ತೆರೆದ, ರೇಡಿಯಂ ಕಂಡುಹಿಡಿದ ಮೇರಿಯ ಕಚೇರಿ ಮಹಾಸನ್ನಿಧಿಯಲ್ಲದೆ ಮತ್ತೇನು? ಈ ಕೊಠಡಿಯ ಪಕ್ಕದಲ್ಲಿಯೇ ಆಕೆಯ ಪ್ರಯೋಗಾಲಯವಿದೆ. ಮೇರಿ ಉಪಯೋಗಿಸಿದ ಉಪಕರಣಗಳಿವೆ ಇಲ್ಲಿ.

ಮ್ಯೂಸಿಯಂ ಒಳಗೆ ಮತ್ತು ಹೊರಗೆ ದೊಡ್ಡ ದೊಡ್ಡ ಗಾತ್ರದ ಮೇರಿ ಮತ್ತು ಪಿಯೆರಿ ಅವರುಗಳ ಚಿತ್ರಗಳಿವೆ. ಆನ್ ಹೌರಿಯವರು ನುರಿತ ಫೋಟೊಗ್ರಾಫರ್. ಅವರ ಕೈಚಳಕ ಅಸಾಧಾರಣವಾದದ್ದು. ನನ್ನನ್ನು ಪ್ರತಿ ಚಿತ್ರದ ಪಕ್ಕವೂ, ಹೇಗೆ ನಿಲ್ಲಬೇಕೆಂದು ಹೇಳಿ ನಿಲ್ಲಿಸಿ, ಫೋಟೊಗಳನ್ನೂ ತೆಗೆದರು. ಅವನ್ನು ನಮಗೆ ಕಳುಹಿಸಿದಾಗ ನಾನು ಬೆರಗಾದೆ. ನಾನು ಮೇರಿ ಮತ್ತು ಪಿಯೆರಿ ಅವರ ಪಕ್ಕ ನಿಂತಂತೆಯೇ ಭಾಸವಾಯಿತು.

ಮ್ಯೂಸಿಯಂ ನೋಡಿದ ನಂತರ ನಮ್ಮನ್ನು ಮತ್ತೆ ಮೇರಿಯ ಕೊಠಡಿಗೆ ಕರೆತಂದರು. ಅಲ್ಲಿ ನಿರ್ದೇಶಕ ರೆನಾಡ್ ಅವರು ನನಗೆ ಒಂದು ದೊಡ್ಡ ಪದಕವನ್ನು ನೀಡಿದರು. ಸುಮಾರು ಹತ್ತು ಸೆಂಟಿ ಮೀಟರುಗಳ ವ್ಯಾಸದ ಪದಕ. ಒಂದು ಕಡೆ ಮೇರಿ ಕ್ಯೂರಿ ಮತ್ತು ಕ್ಲಾಡಿಯಸ್ ರೆಗಾಡ್ ಅವರುಗಳ ಕೆತ್ತಿದ ಚಿತ್ರ. ಮತ್ತೊಂದು ಕಡೆ ಟಿಪ್ಪಣಿ. 2021ರಲ್ಲಿ 'ಲ ಇನ್‌ಸ್ಟಿಟ್ಯೂಟ್ ಕ್ಯೂರಿ ಶತಮಾನೋತ್ಸವವನ್ನು ಆಚರಿಸಿತು. ಆ ಸಂದರ್ಭದಲ್ಲಿ ಬಿಡುಗಡೆಗೊಂಡ ಸ್ಮಾರಕ ಅದು. ನನಗೇನೋ ಪ್ರಶಸ್ತಿಯೇ ದೊರೆತಂತಾಯ್ತು. ನಂತರ ಆನ್ ಹೌರಿ ನಮ್ಮನ್ನು ಅವರ ಕೊಠಡಿಗೆ ಕರೆದೊಯ್ದು ಒಂದು ಅಪೂರ್ವ ಚಿತ್ರವನ್ನು ನೀಡಿದರು. ಸುಮಾರು ಒಂದು ಅಡಿ ಅಗಲದ ಈ ಚಿತ್ರದಲ್ಲಿ ಮೇರಿ ಮತ್ತು ಪಿಯೆರಿ ಇಬ್ಬರೂ ಇದ್ದಾರೆ. ಅಲ್ಲದೆ ಅದರಲ್ಲಿ ಅವರಿಬ್ಬರೂ ರೇಡಿಯಂನ ಪರಮಾಣು ಸಂಖ್ಯೆಯನ್ನು ಗಣಿಸಿದ್ದಾರೆ. ಈ ಚಿತ್ರದಲ್ಲಿ ಇಬ್ಬರ ಕೈಬರಹವೂ ಇದೆ. ಈ ಎರಡು ಸ್ಮಾರಕಗಳನ್ನು ಸಿಡ್ನಿಯ ನಮ್ಮ ಮನೆಗೆ ಬಂದವರೆಲ್ಲಾ ಮೆಚ್ಚಿ 'ನೀವೇ ಧನ್ಯರು' ಎಂದಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in